ಆ) ಕೆಲಸದಿಂದ ಹಿಂತೆಗೆದುಕೊಂಡ ಬಾಲಕಾರ್ಮಿಕರನ್ನು ಶಿಕ್ಷಣ ಇಲಾಖೆಯ ಔಪಚಾರಿಕ ಶಾಲೆಗಳಲ್ಲಿ ನೊಂದಾಯಿಸಲಾಗುತ್ತಿದೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ವಿಶೇಷ ಶಾಲೆಗಳಲ್ಲಿ ಪ್ರಾರಂಭಿಸಲಾಗಿದೆ.

ಬಾಲಕಾರ್ಮಿಕರ ಕುಟುಂಬದ ಒಬ್ಬ ಇಚ್ಛೆಯುಳ್ಳ ಸಮರ್ಥ ಸದಸ್ಯರನ್ನು ಗುರುತಿಸಿ, ಸರ್ಕಾರ ಹಲವಾರು ಯೋಜನೆಗಳಾದ ಐ ಆರ್ ಡಿಪಿ, ಜಿ ಆರ್ ವೈ, ಎನ್ ಆರ್ ವೈ, ಇ ಎ ಎನ್, ಡಿಪಿ ಎಪಿ, ಇತ್ಯಾದಿ ಯೋಜನೆಗಳಡಿಯಲ್ಲಿ ಕೆಲಸಗಳನ್ನು ನೀಡಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಇ) 96,267

ಈ) 1. ಕೆಲಸದಿಂದ ಹಿಂದಕ್ಕೆ ಪಡೆದ ಬಾಲಕಾರ್ಮಿಕರನ್ನು ಶಿಕ್ಷಣ ಇಲಾಖೆಯ ಔಪಚಾರಿಕ ಶಾಲೆಗಳಲ್ಲಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅನೌಪಚಾರಿಕ ಶಾಲೆಗಳಲ್ಲಿ ನೊಂದಾಯಿಸಲಾಗುತ್ತಿದೆ.

2. ಬಾಲಕಾರ್ಮಿಕರ ಕುಟುಂಬದ ಒಬ್ಬ ಇಚ್ಛೆಯುಳ್ಳ ಸಮರ್ಥ ಸದಸ್ಯರನ್ನು ಗುರುತಿಸಿ, ಸರ್ಕಾರ ಹಲವಾರುಯೋಜನೆಗಳಾದ ಐ ಆರ್ ಡಿಪಿ, ಜಿ ಆರ್ ವೈ, ಎನ್ ಆರ್ ವೈ, ಇ ಎ ಎಸ್ , ಡಿಪಿ ಎಪಿ, ಇತ್ಯಾದಿ ಯೋಜನೆಗಳಡಿಯಲ್ಲಿ ಕೆಲಸಗಳನ್ನು ನೀಡಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

3. ಮೂಲ ನಿಧಿ ಮತ್ತು ತಪ್ಪಿತಸ್ಥ ಮಾಲೀಕರಿಂದ ವಸೂಲಾದ ದಂಡ ಹಣದಿಂದ ಉದ್ಭವಿಸುವ ಬಡ್ಡಿಯನ್ನು ಬಾಲಕಾರ್ಮಿಕರ ಕಲ್ಯಾಣಕ್ಕಾಗಿ ಉಪಯೋಗಿಸಲಾಗುವುದು.

ರಾಜ್ಯದ ಕರಾವಳಿಯಲ್ಲಿರುವ ಮೀನುಗಾರಿಕಾ ಬಂದರುಗಳ ಹೂಳೆತ್ತುವ ಕಾರ್ಯಕ್ರಮ

234 (494) ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದ ಕರಾವಳಿಯಲ್ಲಿನ ದಕ್ಷಿಣ ಕನ್ನಡ ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಯಾವ ಯಾವ ಮೀನುಗಾರಿಕಾ ಬಂದರುಗಳ ಹೂಳೆತ್ತುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಆ) ಈ ಹೂಳೆತ್ತುವ ಕಾರ್ಯಕ್ರಮಕ್ಕೆ ಮೀನುಗಾರಿಕಾ ಇಲಾಖೆ 1997-98ರ ಸಾಲಿನಲ್ಲಿ ನಿಗಧಿಪಡಿಸಿದ ಮೊತ್ತವೆಷ್ಟು;

ಇ) ಮಲ್ಪೆ ಹಾಗೂ ಬೆಂಗಳೂರು ಮೀನುಗಾರಿಕಾ ಬಂದರುಗಳಲ್ಲಿ ಹೂಳೆತ್ತುವ ಕಾರ್ಯಕ್ರಮದ ವಿಳಂಬದಿಂದ ಮೀನುಗಾರಿಕಾ ದೋಣಿಗಳು ಅಪಘಾತಕ್ಕೊಳಪಟ್ಟು ಮೀನುಗಾರರು ಸತ್ತ ಬಗ್ಗೆ ಸರಕಾರಕ್ಕೆ ಇಲಾಖೆಯಿಂದ ಬಂದ ವರದಿಯೇನು?

ಈ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರಿ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಉತ್ತರ ಕನ್ನಡ ಜಿಲ್ಲೆಯ ಭಟ್ಕಳ, ತದಡಿ, ಕಾರವಾರ ಹಾಗೂ ಬೇಲಿಕೇರಿ, ಉಡುಪಿ, ಜಿಲ್ಲೆಯ ಮಲ್ಪೆ, ಕೋಡಿ ಬೆಂಗ್ರೆ, ಹೆಜಮಾಡಿ ಕೋಡಿ ಮೀನುಗಾರಿಕಾ ಕೇಂದ್ರಗಳಲ್ಲಿ ಹೂಳೆತ್ತುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಅ) ಪ್ರಸಕ್ತ ಸಾಲಿನಲ್ಲಿ ರೂ. 25.00 ಲಕ್ಷ ಒದಗಿಸಲಾಗಿದೆ.

ಇ) 1996-97 ಮತ್ತು 1997-98ನೇ ಸಾಲುಗಳಲ್ಲಿ ಯಾವುದೇ ಪ್ರಕರಣ ವರದಿಯಾಗಿಲ್ಲ

ಈ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮೀನುಗಾರಿಕಾ ಬಂದರಿನಲ್ಲಿ ರೂ. 140.00 ಲಕ್ಷ ವೆಚ್ಚದಲ್ಲಿ ಹೂಳೆತ್ತುವ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಬಂದರಿನಲ್ಲಿ ರೂ. 75.00 ಲಕ್ಷ ವೆಚ್ಚದಲ್ಲಿ ಹೂಳೆತ್ತುವ ಕೆಲಸ ಕೈಗೊಂಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಉಡುಪಿ ಜಿಲ್ಲೆಯ ಮಲ್ಪೆ ಮೀನುಗಾರಿಕೆ ಬಂದರಿನಲ್ಲಿ ಹೂಳೆತ್ತುವ ಕೆಲಸ ಪ್ರಾರಂಭಿಸಲಾಗಿದೆ.

ಅಂಕೋಲ ತಾಲ್ಲೂಕಿನ ಬಂದರಿನಲ್ಲಿ ಹೂಳು ತೆಗೆಯುವುದು

236 (486) ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಅಂಕೋಲಾ ತಾಲ್ಲೂಕಿನಲ್ಲಿ ಯಾವ ಬಂದರಿನಲ್ಲಿ ಹೂಳೆತ್ತುವ ಕೆಲಸ ಪ್ರಗತಿಯಲ್ಲಿದೆ; (ವಿವರವಾದ ಮಾಹಿತಿ)

ಆ) ಬೇಲಕೇರಿ ಬಂದರಿನ ಹೂಳೆತ್ತುವ ಹಾಗೂ ಜಟ್ಟಿ ನಿರ್ಮಿಸುವ ಪ್ರಸ್ತಾವನೆಗೆ ಭಾರತ ಸರ್ಕಾರ ಮಂಜೂರಾತಿ ನೀಡಿದೆಯೇ;

ಇ) ತ್ವರಿತವಾಗಿ ಸರ್ಕಾರ ಇವರ ಬಗ್ಗೆ ಕ್ರಮ ಕೈಗೊಳ್ಳುತ್ತದೆಯೆ?

ಶ್ರೀ ಕೆ. ಜಯಪ್ರಕಾಸ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಪ್ರಗತಿಯಲ್ಲಿಲ್ಲ

ಆ) ಹೌದು

ಇ) ಹೌದು

Widening of National Highway and state Highway in Uttara Karnataka District

238 (483) Sri. Visvesvara Hedge (Ankola) : Will the Minister for Public Works be pleased to State

a) Has Government taken up work relating to widening of National Highway and State Highway in Uttara Kannada District?

b) Now, at what places the work has started?

c) What is the width of the Natioinal Highway/State Highway?

d) In which taluk widering work is carried out